ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಕರಾಸ:ಕೇಕ:ಆಡಳಿತ:ಸೇನಿ:/ 239 /15-16 ದಿನಾಂಕ: 23-03-2016
24

ಸುತ್ತೋಲೆ ಸಂಖ್ಯೆ: 1581

ವಿಷಯ: ಕರಾರಸಾ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿ 1982 ರ ನಿಯಮಾವಳಿ 3 (2) ರ ಷೆಡ್ಯೂಲ್ 'ಎ' ಅಡಿ ಬರುವ ಸಂಚಾರ ಇಲಾಖೆಯ ಚಾಲಕ ಹುದ್ದೆಯ ನೇಮಕಾತಿಗೆ ಶೈಕ್ಷಣಿಕ ವಿದ್ಯಾರ್ಹತೆಯ ತಿದ್ದುಪಡಿ ಬಗ್ಗೆ.

ಉಲ್ಲೇಖ: 1) ಠರಾವು ಸಂಖ್ಯೆ 9750 ದಿನಾಂಕ: 07-01-2016.
2) ಸಂ:ಸಾರಿಇ:13 ಸಾಸಂಸೇ:2016 ದಿನಾಂಕ: 03-03-2016

- - - -

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿ 1982 ರ ನಿಯಮಾವಳಿ 3 (2) ರ ಷೆಡ್ಯೂಲ್ 'ಎ' ಅಡಿ ಸಂಚಾರ ಇಲಾಖೆಯಡಿ ಇರುವ ಚಾಲಕ, ದರ್ಜೆ-3 ಹುದ್ದೆಯ ನೇಮಕಾತಿಗೆ ಇತರೆ ಅರ್ಹತೆಗಳೊಂದಿಗೆ ಎಸ್.ಎಸ್.ಎಲ್.ಸಿ. ಶೈಕ್ಷಣಿಕ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿರುತ್ತದೆ. ಆದರೆ, ಚಾಲಕ-ಕಂ-ನಿರ್ವಾಹಕ, ದರ್ಜೆ-3 ಹುದ್ದೆಯ ನೇಮಕಾತಿಗೆ ಮಾತ್ರ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿರುತ್ತದೆ.

ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆಗಳು ಏಕರೀತಿಯಲ್ಲಿದ್ದು, ಚಾಲಕ ಹುದ್ದೆಗೆ ಶೈಕ್ಷಣಿಕ ವಿದ್ಯಾರ್ಹತೆಯನ್ನು ಎಸ್.ಎಸ್.ಎಲ್.ಸಿ. ನಿಗದಿಪಡಿಸಿ, ಚಾಲಕ-ಕಂ-ನಿರ್ವಾಹಕ ಹುದ್ದೆಗೆ ಮಾತ್ರ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ನಿಗದಿಪಡಿಸಿರುವ ಹಿನ್ನೆಲೆಯಲ್ಲಿ ಎರಡೂ ಹುದ್ದೆಗಳಿಗೆ ಏಕರೀತಿಯ ಶೈಕ್ಷಣಿಕ ವಿದ್ಯಾರ್ಹತೆಯನ್ನೇ ನಿಗದಿಪಡಿಸುವ ಸಂಬಂಧ ನಿಗಮದ ಮಂಡಳಿ ನಿರ್ದೇಶಕರ ಪ್ರಸರಣೆಯ ಮೂಲಕ ಹೊರಡಿಸಲಾದ ಉಲ್ಲೇಖ 1 ರಡಿ ನಮೂದಿಸಿರುವ ಮಂಡಳಿಯು ಠರಾವು ಸಂಖ್ಯೆ 9750 ದಿನಾಂಕ: 07-01-2016 ರಲ್ಲಿ ಕರಾರಸಾ ಸಂಸ್ಥೆ (ಪದವೃಂದ ಮತ್ತು ನೇಮಕಾತಿ) ನಿಯಮಾವಳಿ 1982 ರ ನಿಯಮಾವಳಿ 3 (2) ರ ಷೆಡ್ಯೂಲ್ 'ಎ' ಅಡಿ ಬರುವ ಸಂಚಾರ ಇಲಾಖೆಯ ಚಾಲಕ ಹುದ್ದೆಯ ನೇಮಕಾತಿಗೆ ಪ್ರಸ್ತುತ ಇರುವ ಶೈಕ್ಷಣಿಕ ವಿದ್ಯಾರ್ಹತೆಯನ್ನು ತಿದ್ದುಪಡಿಗೆ ತೆಗೆದುಕೊಂಡ ನಿರ್ಣಯವನ್ನು ಉಲ್ಲೇಖ-2 ರಲ್ಲಿ ಸರ್ಕಾರವು ಅನುಮೋದನೆಯನ್ನು ನೀಡಿರುತ್ತದೆ.

ಸರ್ಕಾರದ ಅನುಮೋದನಾ ಪತ್ರದ ಹಾಗೂ ಅಧಿಸೂಚನೆಯ ಪ್ರತಿಗಳನ್ನು ಸುತ್ತೋಲೆಗೆ ಲಗತ್ತಿಸಲಾಗಿದೆ. ಸಂಬಂಧಪಟ್ಟವರೆಲ್ಲರೂ ಮೇಲಿನ ತಿದ್ದುಪಡಿಗಳನ್ನು ಮನದಟ್ಟು ಮಾಡಿಕೊಂಡು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

ಈ ಸುತ್ತೋಲೆಯು ತಕ್ಷಣದಿಂದ ಜಾರಿಗೆ ಬರುತ್ತದೆ.

ಅಡಕ: ಮೇಲಿನಂತೆ.

(ರಾಜೇಂದರ್ ಕುಮಾರ ಕಟಾರಿಯಾ)
ವ್ಯವಸ್ಥಾಪಕ ನಿರ್ದೇಶಕರು

...2